ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).---

ಅ) ಆಹುದು.

ಆ) ಆಹುದು.

ಇ) ೧,೮೨೪ ಲಕ್ಷ ರೂಪಾಯಿಗಳು.

ಈ) ೫೨,೦೦೦ ಎಕರೆಗಳು (೨೧,೦೫೨ ಹೆಕ್ಟೇರುಗಳು).

ಕೃಷಿ ಮಾಡಲು ನೇತ್ರಾವತಿ ನದಿಯ ನೀರು ಪಡೆಯುವ ಬಗ್ಗೆ

೧೯೯ (೨೫೩) ಶ್ರೀ ಎನ್. ಶಿವರಾವ್ (ಬಂಟವಾಳ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆ, ನೇತ್ರಾವತಿ ದಡದಲ್ಲಿ ರೈತಾಪಿ ವರ್ಗಕ್ಕೆ ನದಿಯಿಂದ ನೀರು ಪಡೆದು ಕೃಷಿ ಮಾಡಲು ಕೊಟ್ಟ ನೀರಿನ ಪರವಾನಗಿಯನ್ನು ರದ್ದು ಮಾಡುವ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಆ) ಕಳೆದ ಜನವರಿ ತಿಂಗಳಿನಿಂದ ಅಧಿಕಾರಿಗಳು ರೈತರಿಗೆ ನೀರು ಪಡೆಯಲು ಬಿಡುತ್ತಿಲ್ಲ ಎಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಪರಿಹಾರ ನೀಡಲು ಕೈಗೊಂಡ ಕ್ರಮ ಗಳೇನು?

ಶ್ರೀ ಆರ್.ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಇಲ್ಲ.

ಆ) ಇಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಣೆಬೆನ್ನೂರು ತಾಲ್ಲೂಕಿನಲ್ಲಿ ಏತಾ ನೀರಾವರಿ ಯೋಜನೆ

೨೦೦ (೧೨೪) ಶ್ರೀ ಬಿ.ಜಿ. ಪಾಟೀಲ (ರಾಣೆಬೆನ್ನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ :—

ಅ) ರಾಣೆಬೆನ್ನೂರು ತಾಲ್ಲೂಕಿನಲ್ಲಿ ಏತಾ ನೀರಾವರಿ ಯೋಜನೆಯು ಮೇರೆಗೆ ನೀರೆತ್ತುವ ಮೋಟಾರುಗಳು ಅನೇಕ ಸಾರಿ ಸುಟ್ಟು ಹೋಗಿ ರೈತರಿಗೆ ಆಗುತ್ತಿರುವ ತೊಂದರೆಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ರೈತರಿಗೆ ಪರಿಹಾರ ನೀಡಲು ಸರ್ಕಾರ ದವರು ಕೈಗೊಂಡಿರುವ ಕ್ರಮಗಳೇನು?

ಇ) ರಾಣೆಬೆನ್ನೂರ ತಾಲ್ಲೂಕು ತುಂಗಭದ್ರಾ ನದಿಯಿಂದ ಸುಮಾರು ೮೦ ಮೈಲು ಸುತ್ತು ವರೆದಿದ್ದು ಇನ್ನೂ ಹೆಚ್ಚಿನ ಏತಾ ನೀರಾವರಿ ಯೋಜನೆಗಳಿಗೆ ಅವಕಾಶವಿದ್ದು ಸದರಿ ಅವಕಾಶ ಉಪಯೋಗಿಸಿಕೊಳ್ಳುವಂತೆ ನೀರಾವರಿ ಸೌಲಭ್ಯವನ್ನು ಹೆಚ್ಚಿಸಲಾಗುವುದೇ ?

ಶ್ರೀ ಆರ್.ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ತಾಂತ್ರಿಕ ಕಾರಣಗಳಿಂದಾಗಿ ಕೆಲವೊಂದು ಸಲ ಮೋಟಾರುಗಳು ಸುಟ್ಟಿದ್ದರೂ ಬೇರೆ ಮೋಟಾರುಗಳಿಂದ ನೀರು ಕೊಡಲಾಗಿದೆ. ಸುಟ್ಟ ಮೋಟಾರನ್ನು ಸಹ ಕೂಡಲೇ ಸರಿಪಡಿಸಲಾಗಿದೆ ಇದರಿಂದ ರೈತರಿಗೆ ತೊಂದರೆಯಾಗಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.